806

ಮೈಸೂರ ಗೆಜಿಟ.

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 6, ಸ್ಯ 1890.

☞ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಜೀರು, ವಗ್ಯೆರೇರಿಂದಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇಸ್ತಿಹಾರ್ ನಾಮೆ.

ಫಾರೆಸ್ಟ್ ಇಲಾಖೆ.

ನಂ. 9. ತಾರೀಖು 29ನೇ ಸೆಪ್ಟಂಬರ್ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ದೇಶದಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಪೆಶ್ಯುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗ	ಡಿಸ್ಟ್ರಿಕ್ಟು ಸಿಕಾರಿಪುರದ ಕೋರಿ—14ನೇ ನವಂಬರ್ 1890	ಡಿಟೋ	250 ಟನ್‌ಗಳು.
ಶಿವಮೊಗ್ಗ	ಡಿಟೋ—17ನೇ	ಡಿಟೋ	450 ಡಿಟೋ
ತೀರ್ಥಹಳ್ಳಿ	ಡಿಟೋ—22ನೇ	ಡಿಟೋ	100 ಡಿಟೋ
ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು	ಡಿಟೋ—28ನೇ	ಡಿಟೋ	200 ಡಿಟೋ
ಹಾಸನ ಡಿಸ್ಟ್ರಿಕ್ಟು ಹಾಸನ	ಡಿಟೋ— 4ನೇ	ಡಿಶಂಬರ್	300 ಡಿಟೋ
ಮೈಸೂರು ಡಿಸ್ಟ್ರಿಕ್ಟು ಶ್ರೀರಂಗಪಟ್ಣ	ಡಿಟೋ—10ನೇ	ಡಿಟೋ	350 ಡಿಟೋ
ಹುಣಸೂರು ಡಿಟೋ	ಡಿಟೋ—15ನೇ	ಡಿಟೋ	450 ಡಿಟೋ
ಬೆಂಗಳೂರು ಡಿಸ್ಟ್ರಿಕ್ಟು	ಡಿಟೋ—20ನೇ	ಡಿಟೋ	150 ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮರ್ಕುಂಗಳ 34, 35ನೇ ನಂಬರ್ ಗೆಜೆಟ್‌ಗಳಲ್ಲಿ ಪಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ವೋದಪ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ನಂದೀದುರ್ಗ ಡಿವಿಜ್ಞ ಡಿಸ್ಟ್ರಿಕ್ಟು ಜಡ್ಜ್ಜಿಯವರ ಕೋರ್ಟ್‌ನಿಂದ.

1890ನೇ ಇಸವಿ ಆರ್ಜೀ ನಂಬರ್ 187.

ಮೃತಪಟ್ಟ, ಬೆಂಗಳೂರಲ್ಲಿದ್ದ ವೋಟಗಾನಹಳ್ಳಿ ಚನ್ನಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಫಲಸರಕು ಅಂಗಡಿ ವೋಟಗಾನಹಳ್ಳಿ ಗಂಗಪ್ಪ, ಮೃತಪಟ್ಟ ಸದರೀ ವೋಟಗಾನಹಳ್ಳಿ ಚೆನ್ನಪ್ಪ ತನ್ನ ಸೋದರ ಆಳಿಯ ಆಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ಸ್ಥಳದ ವೋಟಗಾನಹಳ್ಳಿ ಗಂಗಪ್ಪನವರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ವೋಟಗಾನಹಳ್ಳಿ ಚನ್ನಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಪಾಯಿಷ್ ಮಾಡಿರುತ್ತಾರೆ.